# ವಾತ್ಸಲ್ಯಮಯೀ ತಾಯಿ

ಒಬ್ಬ ಉಪಾಧ್ಯಾಯನು ಇಪ್ಪತ್ತೈದು ಮೈಲಿ ದೂರ ನಡೆದು ಶ್ರೀಮಾತೆಯವರನ್ನು ನೋಡಲು ಬರುತ್ತಾನೆ. ಆ ಪ್ರಿಯ ಪುತ್ರನಿಗೆ ಶ್ರೀಮಾತೆಯವರು ಅರ್ಧಗಂಟೆ ಗಾಳಿ ಬೀಸುತ್ತಾರೆ! ಅನಂತರ ಅವನಿಗಾಗಿ ಒಳ್ಳೆಯ ಅಡುಗೆ ಮಾಡಿ ತಾವೇ ಬಡಿಸಿ ಉಪಚರಿಸುತ್ತಾರೆ. ಈಗ ಅವನು ಇಪ್ಪತ್ತೈದು ಮೈಲಿ ನಡೆದುಕೊಂಡು ಮನೆಗೆ ಹಿಂತಿರುಗಿ ಹೋಗುವ ಸಮಯ. ಆ ಮಾತೃಹೃದಯ ಎಷ್ಟೊಂದು ಮಿಡಿಯುತ್ತದೆ! ಆ ಪುತ್ರವಾತ್ಸಲ್ಯ ಅವನನ್ನು ಬಿಟ್ಟುಕೊಡಲೊಲ್ಲದು! ಅವನು ಹೊರಟಾಗ ಅವನೊಡನೆಯೇ ಶ್ರೀಮಾತೆಯವರೂ ಹೊರಡುತ್ತಾರೆ. ಹಳ್ಳಿಯ ಅಂಚಿನವರೆಗೂ ಅವನನ್ನು ಹಿಂಬಾಲಿಸುತ್ತಾರೆ. ಅವನು ಬಹುದೂರ ಹೋಗಿ ತಮ್ಮ ದೃಷ್ಟಿಗೆ ಅಗೋಚರವಾಗುವವರೆಗೂ ಅವನೆಡೆಗೆ ನೆಟ್ಟ ದೃಷ್ಟಿಯುಳ್ಳವರಾಗಿ ಸುಮಾರು ಒಂದು ಗಂಟೆ ನಿಂತುಕೊಂಡೇ ಇರುತ್ತಾರೆ!

❖❖❖

ಶ್ರೀಮಾತೆಯವರ ಪ್ರೀತಿ ಇತರರನ್ನು ಯಾವ ರೀತಿ ಮಂತ್ರಮುಗ್ಧರನ್ನಾಗಿಸುತ್ತಿತ್ತು ಎಂಬುದು ಮಿಸ್ ಮ್ಯಾಕ್ಲಿಯೊಡ್‌ರ ಒಂದು ದಿನದ ವರ್ತನೆಯಿಂದ ತಿಳಿಯಬಹುದು. ಸ್ವಾಮಿ ನಿರ್ಭರಾನಂದರು ಅವರನ್ನು ಬೇಲೂರು ಮಠದಿಂದ ಉದ್ಬೋಧನಕ್ಕೆ ಕರೆದುಕೊಂಡು ಹೋಗಿದ್ದರು. ಅವರು ಹಿಂದಿರುಗಿದಾಗ ಮಠದಲ್ಲಿ ಸಂಧ್ಯಾರತಿ ನಡೆಯುತ್ತಿತ್ತು. ಮ್ಯಾಕ್ಲಿಯೊಡ್ ಆರತಿಯ ನಂತರ ತಾವಿದ್ದ ಅತಿಥಿಗೃಹಕ್ಕೆ ಹೊರಟಾಗ ಕತ್ತಲೆಯಾಗಿತ್ತು. ಅವರು ಸ್ವಲ್ಪದೂರ ಹೋದಮೇಲೆ ಒಬ್ಬ ಬ್ರಹ್ಮಚಾರಿ ಅವರಿಗಾಗಿ ಒಂದು ಲಾಟೀನು ಹಿಡಿದುಕೊಂಡು ಹಿಂದೆ ಹೊರಟರು. ಬ್ರಹ್ಮಚಾರಿ ಅವರ ಸಮೀಪ ಹೋದಾಗ ಅವರು ಭಾವಪೂರ್ಣವಾಗಿ ತಮ್ಮಷ್ಟಕ್ಕೆ ತಾವೆ "ನಾನು ಅವರನ್ನು ನೋಡಿದೆ, ನಾನು ಅವರನ್ನು ನೋಡಿದೆ" ಎಂದು ಮೆಲುದನಿಯಲ್ಲಿ ಉಚ್ಚರಿಸುತ್ತಿರುವುದು ಕೇಳಿಸಿತು. ಅನಂತರ ಬ್ರಹ್ಮಚಾರಿಯನ್ನು ಗಮನಿಸಿ ಅವರ ಕಿವಿಯಲ್ಲಿ ಹೇಳಿದರು, "ಪವಿತ್ರತಾ ಸ್ವರೂಪಿಣಿ ತಾಯಿ! ನಾನು ಅವರನ್ನು ನೋಡಿದೆ" ಎಂದು. ಅವರು ಭಾವಾವೇಶದಲ್ಲಿದ್ದರು, ಯಾಂತ್ರಿಕವಾಗಿ ಹೆಜ್ಜೆ ಹಾಕುತ್ತಾ ಮುಂದೆ ನಡೆದರು. ಮತ್ತೆ "ತಾಯಿ, ತಾಯಿ" ಎನ್ನುತ್ತ ಸ್ವಗತವಾಗಿ ಏನೋ ಹೇಳುತ್ತಿದ್ದರು.

❖❖❖

ಒಮ್ಮೆ ಘಾಟಾಲ್ ಎಂಬ ಸ್ಥಳದಿಂದ ಕೆಲವರು ಕಾಲ್ನಡಿಗೆಯಲ್ಲೇ ಶ್ರೀಮಾತೆಯವರನ್ನು ಕಾಣಲು ಬಂದರು. ಅವರೆಲ್ಲ ತುಂಬ ದರಿದ್ರರು—ಅವರ ಉಡುಗೆ, ಕೆದರಿದ ತಲೆಗೂದಲು, ಮುಖದ ಚಹರೆ ಇತ್ಯಾದಿಗಳು ಅದನ್ನು ಸೂಚಿಸುತ್ತಿದ್ದವು. ಜನರಿಂದ ಶ್ರೀಮಾತೆಯವರ ವಿಷಯ ಕೇಳಿ ಅವರ ದರ್ಶನಕ್ಕೆ ಬಂದಿದ್ದರು. ಆದರೆ ಅವರ ದೌರ್ಭಾಗ್ಯಕ್ಕೆ ಮನೆಯ ಬಾಗಿಲು ಮುಚ್ಚಿತ್ತು. ಅಷ್ಟುಹೊತ್ತಿಗೆ ಶ್ರೀಮಾತೆಯವರು ಯಾವುದೋ ಕಾರ್ಯಾರ್ಥವಾಗಿ ಮಹಡಿಯ ವರಾಂಡಕ್ಕೆ ಬಂದರು. ಆಗ ಅವರಿಗೆ ಕಾಣಿಸಿತು—ಮನೆಯ ಮುಂದಿನ ಮೈದಾನದಲ್ಲಿ ತಾವಿರುವ ಮಹಡಿಯ ಕಡೆಗೆ ಮುಖಮಾಡಿಕೊಂಡು ಅನೇಕರು ಕುಳಿತಿದ್ದರು. ಶ್ರೀಮಾತೆಯವರನ್ನು ಕಾಣುತ್ತಲೆ ಅವರು ಹೇಳತೊಡಗಿದರು, "ತಾಯಿ, ನಾವು ಬಹುದೂರದಿಂದ ಬಂದಿದ್ದೇವೆ. ಜಗಜ್ಜನನಿಯ ದರ್ಶನವಾಗುವುದೆ?" ಎಂದು. ಶ್ರೀಮಾತೆಯವರು ಸೇವಕನೊಬ್ಬನಿಗೆ ಹೇಳಿದರು, "ಅವರನ್ನು ಕರೆದುಕೊಂಡು ಬಾ. ಆಹಾ! ಅವರು ಎಷ್ಟು ದೂರದಿಂದ ಬಂದು ಕುಳಿತುಕೊಂಡಿದ್ದಾರೆ!" ಎಂದು. ಸೇವಕ ಸಂಕೋಚದಿಂದ ನುಡಿದ : "ತಾಯಿ, ಅವರೆಲ್ಲ ಭಿಕಾರಿಗಳು, ತುಂಬ ಕೊಳಕು. ಅವರನ್ನು ಒಳಗೆ ಕರೆದುಕೊಂಡು ಬರುವುದೆ?" ಶ್ರೀಮಾತೆಯವರು ನೊಂದು ನುಡಿದರು: "ಪೃಥಿವಿಯ ಸರ್ವರಿಗೂ ನಾನು ದರ್ಶನ ನೀಡುತ್ತೇನೆ; ಮತ್ತೆ ಇವರು ಎಷ್ಟು ಕಷ್ಟಪಟ್ಟು ಬಂದಿದ್ದಾರೆ! ಇವರಿಗೆ ದರ್ಶನ ನೀಡಲಾರೆನೇ? ಹೋಗು ಕರೆದುಕೊಂಡು ಬಾ ಅವರನ್ನು; ಹೊರಗಡೆ ಕೊಳಕಾದರೇನಂತೆ, ಅವರ ಅಂತರಂಗ ಪರಿಶುದ್ಧ."

❖❖❖

ಒಂದು ದಿನ ಮಧ್ಯಾಹ್ನ ಊಟದನಂತರ ಶ್ರೀಮಾತೆಯವರು ಸ್ವಲ್ಪ ವಿಶ್ರಾಂತಿ ಪಡೆಯಲು ಮಂಚದ ಮೇಲೆ ಮಲಗಿರುವುದನ್ನು ಕಂಡು ಸೇವೆಗೆ ಇದೇ ಸುಸಮಯವೆಂದು ಬಗೆದು ಸೇವಕನೊಬ್ಬ ಅವರಿಗೆ ಬೀಸಣಿಗೆಯಿಂದ ಗಾಳಿ ಹಾಕತೊಡಗಿದ. ಶ್ರೀಮಾತೆಯವರು ತಮ್ಮ ಜೀವನದ ಕೊನೆಗಾಲದಲ್ಲಿ ಕಾಯಿಲೆಯಿಂದ ನರಳುತ್ತಿದ್ದ ಸಮಯವದು. ಅವನು ಬೀಸಣಿಗೆ ಹಿಡಿದು ಎರಡು-ಮೂರು ಸುತ್ತ ಗಾಳಿ ಹಾಕುತ್ತಿದ್ದಂತೆಯೆ "ಸಾಕು, ಬೇಡ, ನಿನ್ನ ಕೈ ನೋವಾಗುವುದು" ಎಂದರು ಶ್ರೀಮಾತೆಯವರು. ಅದು ಕೈಬೀಸಣಿಗೆಯಾದ್ದರಿಂದ ಏನೂ ತೊಂದರೆಯಿಲ್ಲ, ಕೈನೋವಾದರೆ ತಾನಾಗಿಯೇ ನಿಲ್ಲಿಸಿಬಿಡುತ್ತೇನೆಂದು ಹೇಳಿ ಸೇವಕನು ಮುಂದುವರಿಸಿದ. ಸ್ವಲ್ಪ ಹೊತ್ತಿನ ನಂತರ ಮತ್ತೆ ಕಣ್ಣು ತೆರೆದು ಹೇಳಿದರು, "ಬೇಡಪ್ಪ ಸಾಕು, ನಿನ್ನ ಕೈ ನೋವಾಗುವುದು. ನಾನು ಹಾಗೆಯೇ ನಿದ್ರಿಸುತ್ತೇನೆ" ಎಂದು. ಇಷ್ಟಾದರೂ ಅವನು ನಿಲ್ಲಿಸದಿರಲು ಸ್ವಲ್ಪ ಹೊತ್ತಿನ ನಂತರ ಮತ್ತೆ ಹೇಳಿದರು: "ಮಗು, ನಿನ್ನ ಕೈನೋವಾಗುವುದಲ್ಲ ಎಂದು ಚಿಂತಿಸಿ ನನಗೆ ನಿದ್ರೆ ಬರುತ್ತಿಲ್ಲ. ನೀನು ಗಾಳಿ ಹಾಕುವುದನ್ನು ನಿಲ್ಲಿಸು, ಆಗಲೆ ನಾನು ನಿಶ್ಚಿಂತೆಯಿಂದ ನಿದ್ರಿಸಬಹುದು." ಅನಿವಾರ್ಯವಾಗಿ ಅವನು ಬೀಸಣಿಗೆಯನ್ನು ಕೆಳಗಿಡಬೇಕಾಯಿತು.

ಜಯರಾಂಬಾಟಿಯ ಆ ಸುಮಧುರ ಆಹ್ವಾನವು ನೆನಪಿಗೆ ಬರುತ್ತದೆ. "ಮಕ್ಕಳೇ, ಸಮಯವಾಗಿದೆ, ತಿಂಡಿ ತಿನ್ನಲು ಬನ್ನಿ." ಆ ಕರೆ ಈಗಲೂ ಕಿವಿಯಲ್ಲಿ ಮೊಳಗುತ್ತಿದೆ, ಪ್ರಾಣವು ವ್ಯಾಕುಲಗೊಳ್ಳುತ್ತದೆ. "ಹಕ್ಕಿಯಾಗಿ ಹಾರಿ ಹೋಗೋಣ" ಎನ್ನಿಸುತ್ತದೆ. ನೀರಿನ ಲೋಟ ಹಾಗೂ ಚಿಕ್ಕ ಬಟ್ಟಲಿನಲ್ಲಿ ಬೆಲ್ಲ-ಕಡಲೆ ಪುರಿ, ಎಲೆಯಲ್ಲಿ ಪ್ರಸಾದದ ಹಣ್ಣು-ಮಿಠಾಯಿಗಳನ್ನಿರಿಸಿ "ಕರುವಿನ ಬರುವನ್ನೇ ನಿರೀಕ್ಷಿಸುವ ಗೋವಿನಂತೆ" ಶ್ರೀಮಾತೆಯವರು ಪ್ರೀತಿಯಿಂದ ಬಾಗಿಲಿನತ್ತ ನೋಡುತ್ತಿದ್ದರು. ಆದರೆ ಆ ಭಾಗ್ಯ ಇನ್ನು ಸಿಗದು! ಆ ಮಾತೃಪ್ರೇಮವು ಇಡೀ ವಿಶ್ವವನ್ನೇ ಹುಡುಕಿದರೂ ಸಿಗದು! ಪುರುಷರ ತಿಂಡಿತೀರ್ಥ ಮುಗಿದ ಬಳಿಕ, ಮಹಿಳೆಯರಿಗೂ ಕೊಟ್ಟು, ಶ್ರೀಮಾತೆಯವರು ತಾವೂ ಸ್ವಲ್ಪ ಸೇವಿಸುತ್ತಿದ್ದರು. ಭಕ್ತರು ತಂದುಕೊಟ್ಟ ಹಣ್ಣು-ಮಿಠಾಯಿಗಳು ಸಿಗುತ್ತಿದ್ದುದು ಇತರರಿಗೆ, ಅವರು ಅತಿ ಸ್ವಲ್ಪವೇ ಬಾಯಿಗೆ ಹಾಕಿಕೊಳ್ಳುತ್ತಿದ್ದರು ಅಷ್ಟೇ. ನಾಲ್ಕು ಕಾಳು ಕಡಲೆಪುರಿಯೇ ಅವರ ಬೆಳಗಿನ ತಿಂಡಿ! ನಂತರ ಹಲ್ಲುಗಳು ಉದುರಿದ ಮೇಲೆ, ಅಗಿಯಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಆಗ ಸೆರಗಿನಲ್ಲಿ ಕಡಲೆಪುರಿಯನ್ನು ತೆಗೆದುಕೊಂಡು ಅದನ್ನು ಕುಟ್ಟಿ ಪುಡಿಮಾಡಿಕೊಂಡು ನವಾಸನದ ಭಕ್ತನ ಹೆಂಡತಿಯನ್ನು ಕರೆದು, "ಸ್ವಲ್ಪ ಉಪ್ಪು ಹಾಗೂ ಮೆಣಸಿನಕಾಯಿಯನ್ನು ಕೊಡಮ್ಮಾ" ಎನ್ನುತ್ತಿದ್ದರು. —*ಸ್ವಾಮಿ ಶಾರದೇಶಾನಂದ*

❖❖❖

ಆರೋಗ್ಯವಾಗಿದ್ದ ತನಕ ಶ್ರೀಮಾತೆಯವರು ಸ್ವತಃ ತಾವೇ ಅಡುಗೆ ಮಾಡಿ ಬಡಿಸುತ್ತಿದ್ದರು. ಅನಂತರ ಅವರಿಗದು ಸಾಧ್ಯವಾಗುತ್ತಿರಲಿಲ್ಲ. ಆದರೆ ಊಟಮಾಡುತ್ತಿದ್ದವರ ಮುಂದೆ ಕುಳಿತು ಶುರುವಿನಿಂದ ಕಡೆಯವರೆಗೂ ನೋಡುತ್ತಿದ್ದರು. ಆಸನ, ಎಲೆ, ನೀರು ಎಲ್ಲವೂ ಸರಿಯಾಗಿರಬೇಕು—ಪರಿಶುದ್ಧವೂ, ಚೊಕ್ಕವೂ ಆಗಿರಬೇಕು. ಲೋಟಗಳಲ್ಲಿ ನೀರು ಹೆಚ್ಚು, ಕಡಮೆ ಇರಬಾರದು. ಎಲೆಯು ಆಸನಕ್ಕೆ ಸರಿಯಾಗಿ ನಡುವಿನಲ್ಲಿರಬೇಕು. ಆಸನಗಳು ಒಂದುಕ್ಕೊಂದು ತೀರ ಹತ್ತಿರವೂ ಇರಕೂಡದು, ದೂರವೂ ಇರಕೂಡದು—ಎರಡು ಆಸನಗಳ ನಡುವೆ ಸಮಾನ ಅಂತರವಿರಬೇಕು. ಬಡಿಸುತ್ತಿದ್ದಾಗ, ಶ್ರೀಮಾತೆಯವರ ಸುಮಧುರ ಆಹ್ವಾನ ಎಲ್ಲರ ಕಿವಿಗೂ ಬೀಳುತ್ತಿದೆ: "ಮಕ್ಕಳೇ, ಸಮಯವಾಗಿದೆ, ತಡವಾಗಿ ಹೋಗಿದೆ, ಬೇಗ ಬೇಗ ಬನ್ನಿ. ಎಲೆಯಲ್ಲಿ ಅನ್ನ ಬಡಿಸಲಾಗಿದೆ. ಊಟ ಮಾಡಬನ್ನಿ." ಹುಡುಗರು ಬರುವುದು ತಡವಾಗುತ್ತಿದೆ, ಮಾಡುತ್ತಿದ್ದ ಕೆಲಸವನ್ನು ಮುಗಿಸದೆ ಬರಲಾರರು; ಶ್ರೀಮಾತೆಯವರು ಎಲೆಯ ಬಳಿ ಕುಳಿತು ಸೆರಗಿನಿಂದ ನೊಣಗಳನ್ನು ಓಡಿಸುತ್ತಿದ್ದಾರೆ. ಹುಡುಗರು ಊಟ ಮಾಡುತ್ತಿದ್ದಾರೆ—ಶ್ರೀಮಾತೆಯವರ ಕಣ್ಣು ತುಟಿಗಳಲ್ಲಿ ಎಂಥ ಗಭೀರ ಆನಂದವು ಪ್ರಕಾಶಿಸುತ್ತಿದೆ! ಸುಮಧುರ ಸ್ವರದಲ್ಲಿ ಹುಡುಗರನ್ನು ಕೇಳುತ್ತಿದ್ದಾರೆ: "ಅಡುಗೆ ಹೇಗಾಗಿದೆ?" ಯಾರದೊ ಎಲೆಯಲ್ಲಿ ಅನ್ನ ಮುಗಿದಿದೆ, ಯಾರಿಗೊ ಸಾರು ಕಡಮೆ, ಯಾರಿಗೇನು ರುಚಿಸುತ್ತದೆಯೆಂದು ನೋಡಿ, ಕೇಳಿ, ಹೇಳಿ ಹೊಟ್ಟೆ ತುಂಬ ತಿನ್ನಿಸುತ್ತಿದ್ದಾರೆ.

—*ಸ್ವಾಮಿ ಶಾರದೇಶಾನಂದ*

❖❖❖

ಒಮ್ಮೆ ಪದ್ಮಾ ನದಿಯ ಪ್ರವಾಹದಲ್ಲಿ ನಮ್ಮ ಮನೆಯೆಲ್ಲ ಕೊಚ್ಚಿಕೊಂಡು ಹೋಯಿತು. ಕಲ್ಕತ್ತೆಯಲ್ಲಿದ್ದ ನನಗೆ ಈ ಸುದ್ದಿ ತಲುಪಿತು. ತಂದೆ, ತಾಯಿ, ಹೆಂಡತಿ, ಮಕ್ಕಳ ಸಮೇತ ನಮ್ಮ ಪರಿವಾರವಿಡೀ ನಿರಾಶ್ರಿತವಾಯಿತು. ಏನು ಮಾಡುವುದು, ಯಾರಲ್ಲಿ ಹೇಳುವುದೆಂದು ತಿಳಿಯದಾದೆ. ಸಂಕೋಚಗೊಂಡು ಶ್ರೀಮಾತೆ ಅಥವಾ ಶರತ್ ಮಹಾರಾಜರಿಗೂ ನನ್ನ ದುರ್ದೈವದ ಸಂಗತಿಯನ್ನು ಹೇಳಲಿಲ್ಲ. ಚಿಂತಾಕ್ರಾಂತನಾದೆ, ರಾತ್ರಿ ನಿದ್ರೆಯಿಲ್ಲ. ಊಟತಿಂಡಿಗಳಲ್ಲಿ ಮನಸ್ಸಿಲ್ಲ. ಒಂದು ದಿನ ಶ್ರೀಮಾತೆಯವರು ನನ್ನನ್ನು ಕರೆದು ಅತ್ಯಂತ ಪ್ರೀತಿ ಹಾಗೂ ಮಮತೆಯಿಂದ ಹೇಳಿದರು: "ವಿಧಿಯನ್ನು ಯಾರೂ ತಿದ್ದಲಾರರು, ಚಂದೂ. ನೀನು ಇಷ್ಟೊಂದು ದುಃಖಿತನಾಗಬೇಡ. ನೀನೊಮ್ಮೆ ಹಳ್ಳಿಗೆ ಹೋಗಿ ಅಲ್ಲಿರುವವರಿಗೆ ಏನಾದರೊಂದು ವ್ಯವಸ್ಥೆಯನ್ನು ಮಾಡಿ ಬಾ. ಇಷ್ಟೊಂದು ಚಿಂತೆ ಮಾಡಿದರೆ ಏನು ಪ್ರಯೋಜನ? ಊಟ-ತಿಂಡಿಗಳನ್ನೇಕೆ ನಿಲ್ಲಿಸಿರುವೆ?" ಅವರ ಮಾತು ಕೇಳಿ ಕಣ್ತುಂಬಿ ಬಂದವು. ನಾನೆಂದೆ: "ಅಮ್ಮಾ, ಆದರೆ ನಾನಲ್ಲಿಗೆ ಹೋಗಿ ಮಾಡುವುದಾದರೂ ಏನು? ಮನೆ-ಮಠವೆಲ್ಲ ಕೊಚ್ಚಿಕೊಂಡು ಹೋಗಿದೆ. ಏನಾದರೂ ವ್ಯವಸ್ಥೆ ಮಾಡಲು ತುಂಬ ಹಣ ಬೇಕು. ಅದಲ್ಲದೆ ಹೋಗಿ-ಬರಲು ಬೇಕಾಗುವಷ್ಟು ಹಣವೂ ನನ್ನಲ್ಲಿಲ್ಲ." ಕರುಣಾಮಯಿ ಶಾಂತಚಿತ್ತದಿಂದ ನುಡಿದರು: "ನನಗೆಲ್ಲ ಗೊತ್ತು. ನೀನು ನನ್ನ ಹತ್ತಿರವಿರುವ ಸ್ವಲ್ಪ ಹಣವನ್ನು ತೆಗೆದುಕೊಂಡು ಮನೆಗೆ ಹೋಗು. ಇದು ನಿನ್ನ ದಾರಿಯ ಖರ್ಚಿಗೂ, ಮನೆ ಕಟ್ಟಲೂ ಸಾಕಾಗುತ್ತದೆ. ಆದರೆ ನಾನು ನಿನಗೆ ಹಣ ಕೊಟ್ಟೆನೆಂದು ಯಾರಿಗೂ ಹೇಳಬೇಡ. 'ಪ್ರವಾಹದಲ್ಲಿ ಮನೆ ಕೊಚ್ಚಿಕೊಂಡು ಹೋಗಿದೆ. ಸುದ್ದಿ ಕೇಳಿ ಮನೆಗೆ ಹೋಗುತ್ತಿರುವೆ ' ಎಂದು ಮಾತ್ರವೇ ಹೇಳು." ಹೀಗೆ ಹೇಳುತ್ತ ತಮ್ಮ ಸೀರೆಯ ಸೆರಗಿನ ತುದಿಯಲ್ಲಿದ್ದ ಹಣದ ಗಂಟನ್ನು ಬಿಚ್ಚಿ ಅದನ್ನು ನನ್ನ ಕೈಯಲ್ಲಿಟ್ಟರು.

ಈ ರೀತಿ ಶ್ರೀಮಾತೆಯವರ ಪ್ರೀತಿಯನ್ನು ನನ್ನ ಜೀವನದಲ್ಲಿ ಅದೆಷ್ಟು ಬಾರಿ ಸವಿದಿದ್ದೇನೋ ಲೆಕ್ಕವಿಲ್ಲ. ನಾನು ಮಾತ್ರವೇ ಏಕೆ, ಯಾರಿಗೂ ತಿಳಿಯದಂತೆ ಶ್ರೀಮಾತೆಯವರು ಇನ್ನೂ ಅದೆಷ್ಟೋ ಜನರಿಗೆ ತಮ್ಮ ಪ್ರೀತಿ ಹಾಗೂ ಕೃಪೆಯನ್ನು ವಿತರಿಸಿದ್ದರೆಂದು ನಮಗೆ ನಂತರ ತಿಳಿಯಿತು.

—*ಚಂದ್ರಮೋಹನ ದತ್ತ*